ಇರಲಿಲ್ಲ. ಆದರೆ, ಆತನ ಹೆಂಡತಿಗೆ ನಾಯಿಯ ತುಂಬಿದ ಹೊಟ್ಟೆಯನ್ನು ಕಂಡಾಗ ಸ್ವಲ್ಪ ಸಹತಾಪ ಅನ್ನಿಸಿತು. ಅದರ ಪರಿಣಾಮವಾಗಿ ಆ ಪುಟ್ಟ ಸೌದೆಕೊಟ್ಟಿಗೆ ರೋಸಿಯ ಜನ್ಮಗೃಹವಾಯಿತು.

ರೋಸಿಯಲ್ಲದೆ ತಾಯಿನಾಯಿಗೆ ಎರಡು ಸಂತಾನಗಳಿದ್ದವು. ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ ಒಂದು ಗಂಡುಮರಿ ಅಂತಿಮ ಉಸಿರೆಳೆಯಿತು.

ಜಿಮ್ಮಿಯದು ಚಿಕ್ಕಂದಿನಲ್ಲಿಯೇ ಕೋಮಲಕಾಯ. ಬೆಳ್ಳಗೆ ಹೊಳೆಯುವ ದೇಹ. ಕೊರಳಲ್ಲೂ ಪಕ್ಕೆಗಳಲ್ಲೂ ಸುಂದರವಾದ ಪಾಂಡುರ. ಅವನ ಕಿವಿ ಹುಟ್ಟುವಾಗಲೇ ಮಡಚಿ ಬಿದ್ದುಕೊಂಡಿತ್ತು.

"ನಾಯಿಮರಿ ತೊಂದರೆಯಿಲ್ಲವಲ್ಲ... ನಾಟಿಯಲ್ಲವೆ, ಕಾಣುವುದಿಲ್ಲವೇ ಕಿವಿ?..."

ಜಿಮ್ಮಿ ಆರಂಭದಲ್ಲಿಯೇ ಮನೆಯ ಯಜಮಾನರಲ್ಲಿ ಸದಭಿಪ್ರಾಯ ಹುಟ್ಟುವಂತೆ ಮಾಡಿದ. ಜಿಮ್ಮಿಯನ್ನು ಸಾಕಲು ಅವರು ನಿರ್ಧರಿಸಿಯೂ ಆಯಿತು. ಮೊಲೆ ಕುಡಿಯುವುದನ್ನು ಬಿಡುವ ಪ್ರಾಯವಾಗುವಾಗ ಅವರು ಅದರ ಕೊರಳಲ್ಲಿ ಸುಂದರವಾದ ಒಂದು ಚರ್ಮದ ಪಟ್ಟಿಯನ್ನು ಕಟ್ಟಿದರು. 'ಜಿಮ್ಮಿ' ಎಂದು ಹೆಸರು ಇಟ್ಟು, ಬೆಳೆಸಲಾರಂಭಿಸಿದರು.

ರೋಸಿ ಮತ್ತು ಅವಳ ತಾಯಿ ಅಲ್ಲಿಯೇ ಹೊರಗಿನವರಾಗಿ ಉಳಿದರು. ಅಡುಗೆ ಕೆಲಸದಾಳಿನ ದಯೆಯಿಂದ ಏನಾದರೂ ಸಿಕ್ಕಿದ್ದಷ್ಟೆ ಅವರ ಆಹಾರ.

ಜಿಮ್ಮಿಗೆ ಸೌದೆ ಕೊಟ್ಟಿಗೆಯಿಂದ ಜಗಲಿಗೆ ವರ್ಗಾವಣೆ ಸಿಕ್ಕಿತು. ಅವನಿಗೆ ಮನೆಯ ಯಜಮಾನರ ಕೈಗಳಿಂದಲೇ ಆಹಾರ ಸಿಗುತ್ತಿತ್ತು. ಊಟ ಮಾಡಿ ಹೊರಗೆ ಬಂದರೆ ಸ್ವಲ್ಪ ಜೋರಾದ ಸ್ವರದಲ್ಲಿಯೇ ಕರೆಯುವರು!

"ಜಿಮ್ಮಿ, ಕಮಾನ್..."

ಜಿಮ್ಮಿ ಓಡಿ ಬರುವನು.

ಮನೆಯವರ ಪ್ರೀತಿ ಪಾತ್ರನಾದುದರಿಂದ ಜಿಮ್ಮಿಗೆ ಸ್ವತಃ ಒಂದು ಗಾಂಭೀರ್ಯ ಬಂತು. ರೋಸಿ ಅದನ್ನು ಹಲವು ಬಾರಿ ಗಮನಿಸಿದ್ದಿದೆ. ಅವನು ತಾಯಿಯನ್ನು ಮತ್ತು ರೋಸಿಯನ್ನು ತಾತ್ಸಾರ ಭಾವದಿಂದ ನೋಡಲಾರಂಭಿಸಿದ. 'ನಾನು ದೊಡ್ಡ ಜನ' ಎಂಬ ಭಾವದ ಅವನ ಆ ನೋಟವೇ ತುಂಬಾ ಅಸಹನೀಯ...

ಒಂದು ಅಲ್ಯುಮಿನಿಯಂ ಪಾತ್ರೆಯಿಂದ ಜಿಮ್ಮಿ ಬಾಲವಲ್ಲಾಡಿಸುತ್ತ ಸಂತೃಪ್ತಿಯಿಂದ ಅನ್ನ ತಿನ್ನುವುದನ್ನು ರೋಸಿ ಆಸೆಯಿಂದ ನೋಡುತ್ತ ನಿಲ್ಲುವುದಿದೆ. ಕೆಲವೊಮ್ಮೆ ಆಕ್ರಮಿಸಿದರೇನು ಎಂಬೊಂದು ಆಲೋಚನೆಯನ್ನು ರೋಸಿ ಮಾಡಿದ್ದಿದೆ. ಆದರೆ, ಸಮೀಪದಲ್ಲಿ ಯಾವಾಗಲೂ ಯಾರಾದರೂ ಇರುತ್ತಿದ್ದರು.

ಮನುಷ್ಯರಿಗೆ ಅವಳು ಹೆದರುತ್ತಿದ್ದಳು. ಜಿಮ್ಮಿಯ ಜೊತೆಗೆ ಅವಳು ಜಗಲಿಗೆ ಓಡಿಹೋದಾಗ ಯಜಮಾನರ ಮಗನ ಕೈಯಿಂದ ಕಟ್ಟಿಗೆಯ ಏಟು ಸಿಕ್ಕಿತ್ತು. ಮನುಷ್ಯರಿಗೆ ಹೆದರಬೇಕೆಂದು ಅವಳಿಗೆ ಮನವರಿಕೆಯಾಗಿತ್ತು. ಬಾಲಕನಾದರೂ ಆ ಹುಡುಗನ ಪೆಟ್ಟು ಎಷ್ಟು ನೋವಿನಿಂದ ಕೂಡಿದೆಯೋ? ಆ ಬಳಿಕ ರೋಸಿ ಜಗಲಿಗೆ ಹೋಗಲಿಲ್ಲ. ಮನುಷ್ಯರಿಂದ ದೂರದಲ್ಲಿ ನಿಲ್ಲುವುದೆಂದು ಅವಳು ತೀರ್ಮಾನಿಸಿದಳು.

ಜಿಮ್ಮಿಗೆ ಎಲ್ಲೆಡೆಯೂ ಪ್ರವೇಶವಿದೆ. ಜಗಲಿಯಲ್ಲಿ ಯಜಮಾನರ ಕಾಲು ಬುಡದಲ್ಲಿ ಎಲ್ಲಾ ಹೊತ್ತಿಗೂ ಸುತ್ತು ಹಾಕುವನು. ಯಜಮಾನರು ಮಾತ್ರ ಅಲ್ಲ. ಭೇಟಿಗೆ ಬರುವವರೆಲ್ಲ ಅವನನ್ನು ಮುದ್ದು ಮಾಡುವುದನ್ನು ರೋಸಿ ಕಂಡಿದ್ದಾಳೆ. ಅಸೂಯೆಯಿಂದ ಅವಳದನ್ನು ನೋಡುತ್ತ ನಿಲ್ಲುತ್ತಿದ್ದಳು. ಯಾಕೆ ಅವರು ನನ್ನನ್ನು ಪೋಷಿಸಬಾರದು. ತಾನು ಹೆಣ್ಣಾಗಿ ಹುಟ್ಟಿದ್ದೆ ಕಾರಣ ಎಂದು ಅವಳು ಸಮಾಧಾನ ಮಾಡಿಕೊಳ್ಳಲು ಯತ್ನಿಸಿ ನೋಡಿದಳು.